ಎಂ. ಅಬ್ದುಲ್ ರೆಹಮಾನ್ ಪಾಷ

ಕಲೆ: ವೆಂಕಟ್ರಮಣ ಭಟ್

# ತಾರೆಗಾಗಿ ಕಾಯುತ್ತಾ...

ಲಕ್ಷ್ಮಿ ಮಲಗಿದ್ದಳು ಚಿತೆಯ ಮೇಲೆ. ದಪ್ಪ ದಪ್ಪ ಸೌದೆಯನ್ನು ಒಟ್ಟಿ ಸಿದ್ಧಪಡಿಸಿದ್ದ ಸುಮಾರು ನಾಲ್ಕಡಿ ಎತ್ತರದ ಚಿತೆ, ನಿಜವಾದದ್ದೇ ಎನ್ನುವಷ್ಟು ನೈಜವಾಗಿತ್ತು. ಸುತ್ತಿದ್ದ ಬಿಳಿಬಟ್ಟೆ ತೆಳ್ಳಗಿತ್ತು. ಮಲಗಿ ಬಹಳ ಹೊತ್ತಾಗಿದ್ದರಿಂದ ಒರಟು ಕಟ್ಟಿಗೆ ತುಂಡುಗಳು ಆಕೆಯ ಬೆನ್ನಿಗೆ ಚುಚ್ಚುತ್ತಿದ್ದವು. ಆದರೂ ಬಹಳ ಬೇಗ ಮುಗಿಯುತ್ತದೆ ಎನ್ನುವ ನಿರೀಕ್ಷೆಯಲ್ಲಿ ಆಕೆ ನೋವನ್ನು ನುಂಗಿಕೊಂಡಿದ್ದಳು. ಇನ್ನೇನು ಅವರು ಬಂದು, ಯಾರು ಎಂಬುದನ್ನೂ ಲಕ್ಷ್ಮಿ ತಿಳಿದುಕೊಳ್ಳುವ ಗೋಜಿಗೆ ಹೋಗಿರಲಿಲ್ಲ. ಅವರು ಬಂದು ಒಮ್ಮೆ ಚಿತೆಗೆ ಬೆಂಕಿಯನ್ನಿಟ್ಟರೆ, ತನ್ನ ಕೆಲಸ ಮುಗಿಯಿತು. ತಾನು ಅಲ್ಲಿಂದ ಎದ್ದು, ತನಗೆ ಬರಬೇಕಾದ ಐದು ನೂರು ರೂಪಾಯಿ ನಗದನ್ನು ತೆಗೆದುಕೊಂಡು ಮನೆಗೆ ಹೊರಟು ಹೋಗಬಹುದು.

ಬರುವಾಗ ಅವರೇ ಬಂದು ವ್ಯಾನಿನಲ್ಲಿ ಕರೆದುಕೊಂಡು ಬಂದಿದ್ದರು. ಆದರೆ ಕೆಲಸ ಮುಗಿದ ನಂತರ ಅದೇ ವ್ಯಾನಿನಲ್ಲಿ ಬಿಟ್ಟು ಬರುವ ಪ್ರಶ್ನೆಯೇ ಇರುವುದಿಲ್ಲ. ಪರವಾಗಿಲ್ಲ, ಆಟೊ ಬಾಟಾ ಅಂತ ಬೇರೆ ಕೊಡುತ್ತಾರಲ್ಲ, ಸಿಟಿ ಬಸ್ಸಲ್ಲಿ ಹೋಗಿ ಅದರಲ್ಲೂ ಸ್ವಲ್ಪ ಉಳಿಸಿಕೊಳ್ಳಬಹುದು.

ಮತ್ತೆ ಲಕ್ಷ್ಮಿಗೆ ತಾನು ಚಿತೆಯ ಮೇಲೆ ಮಲಗಿರುವುದು ನೆನಪಾಯಿತು. ಸುತ್ತಲೂ ಸಿನಿಮಾ ಶೂಟಿಂಗಿನವರ ಸದ್ದುಗದ್ದಲ, ಸಡಗರ, ಜಗಳ ಕೇಳಿಸುತ್ತಲೇ ಇತ್ತು. ಕಾಣಿಸುತ್ತಿರಲಿಲ್ಲ, ಏಕೆಂದರೆ ಮಲಗಿದ್ದಲ್ಲಿಂದ ಲಕ್ಷ್ಮಿಗೆ ಕಾಣಿಸುತ್ತಿದ್ದುದು ಒಂದಿನಿತೂ ಮೋಡವಿಲ್ಲದ ತೆರೆದ ನೀಲಿ ಆಕಾಶ. ಮಧ್ಯಾಹ್ನ ನೆತ್ತಿಯ ಮೇಲೆ ಸುಡುತ್ತಿದ್ದ ಸೂರ್ಯ. ಕಣ್ಣು ಮುಚ್ಚಿದ್ದರೂ ಚುಚ್ಚುತ್ತಿದ್ದ ಬಿಸಿಲು.

ಹೀರೊಯಿನ್, ಸುಕನ್ಯಾಳ ತಾಯಿ ಗಂಗಮ್ಮಳ ಸಿಟ್ಟು ಮತ್ತೆ ಮತ್ತೆ

